ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇದನ್ನು ತಾತ್ವಿಕವಾಗಿ ಸರ್ಕಾರವು ಒಪ್ಪಿದೆ.

ಆ) ಉತ್ತಮ ಗ್ರಾಹಕ ಸೇವಗೆ ಕಾರಣವಾಗುವ ಹೆಚ್ಚಿನ ಚಾಲನಾ ಸಕ್ಷಮತೆ-ಗ್ರಾಹಕರಿಗೆ ಕಡಿಮೆ ವೆಚ್ಚ ಪ್ರಸರಣಾ ಮತ್ತು ವಿತರಣೆಯಲ್ಲಿ ಖಾಸಗೀ ಕ್ಷೇತ್ರದ ಭಾಗವಹಿಸುವಿಕೆಯು ವಿದ್ಯುತ್ ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಅವಕಾಶವಾಗಿ ಇದರಿಂದ ರಾಜ್ಯದ ಹಾಗೂ ಶ್ರೀಸಾಮಾನ್ಯರ ಸರ್ವತೋಮುಖ ಅಭಿವೃದ್ಧಿಗೆ ಸಾಮಾಜಿಕ ಮಟ್ಟದ ಉನ್ನತೀಕರಣಕ್ಕೆ ಅವಕಾಶವಾಗುತ್ತದೆ.

ಇ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ರೈತರ ಪಂಪುಸೆಟ್ಟುಗಳಿಗೆ ಈಗಾಗಲೇ ಪೂರೈಸಿರುವ ರಿಯಾಯಿತಿ ಸೌಲಭ್ಯಗಳನ್ನು ಯಾವುದೇ ರೀತಿಯಲ್ಲಿ ಹಿಂತೆಗೆದುಕೊಳ್ಳುವ ಉದ್ದೇಶವಿರುವುದಿಲ್ಲ.

ಈ) ವಿದ್ಯುತ್ ಸೋರುವಿಕೆಯನ್ನು ತಡೆಗಟ್ಟಲು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕಾರ್ಯಗತಗೊಳಿಸಿದೆ. ಸುಮಾರು 2.8 ಲಕ್ಷ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಲಾಗಿದೆ. ಕಳ್ಳತನದ ಸಾಧ್ಯತೆಯಿರುವ ಸ್ಥಾವರಗಳಲ್ಲಿ ಹಾಗೂ ಪ್ರದೇಶಗಳಲ್ಲಿ ಟ್ಯಾಂಪರ್ ಪ್ರೂಫ್ ಮೀಟರ್‌ಗಳನ್ನು ಅಳವಡಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗಿದೆ. ಎಲ್ಲೆಲ್ಲಿ ವಿದ್ಯುತ್ ಕಳವು ಸಾಧ್ಯತೆ ಇದೆಯೋ ಅಲ್ಲಿ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸರ್ಕಾರ ಔದ್ಯಮಿಕ ಮತ್ತು ಅತಿ ದೊಡ್ಡ ಕೈಗಾರಿಕೆಗಳಿಂದ ಹೆಚ್ಚು ಬಾಕಿ ಬರಬೇಕಿದ್ದು, ಇದರ ವಸೂಲಾತಿಗೂ ಕ್ರಮ ಜರುಗಿಸಲಾಗುತ್ತಿದೆ.

ಇಂಧನ ಬೇಡಿಕೆಯು ಉತ್ಪಾದನೆಗಿಂತ ಅತಿ ಹೆಚ್ಚು ಪಟ್ಟು ಹೆಚ್ಚಾಗಿರುವುದರಿಂದ ಇಂಧನ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದು ಅನಿವಾರ್ಯವಾಗಿದೆ. ವಿದ್ಯುತ್ ಉತ್ಪಾದನೆ, ವಿತರಣೆ ಇತ್ಯಾದಿಗಳಲ್ಲಿ ಖಾಸಗಿಯವರು ಭಾಗವಹಿಸುವುದರಿಂದ ಸಧ್ಯದ ಪರಿಸ್ಥಿತಿಯು ಸುಧಾರಿತವಾಗುವುದೆಂದು ಭಾವಿಸಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ

2938:(4074)

ಶ್ರೀ ಬಸವನಗೌಡ ರಾ.ಪಾಟೀಲ (ವಿಜಾಪುರ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರುವ ಮುಳವಾಡ ಏತ ನೀರಾವರಿ, ಗುತ್ತಿ ಬಸವಣ್ಣ ಏತ ನೀರಾವರಿ ಹಾಗೂ ಚಿಮ್ಮಲಗಿ ಏತ ನೀರಾವರಿ

ಯೋಜನೆಗಳಿಗೆ ಸರಕಾರವು ಕಾಯ್ದಿರಿಸಿದ ಹಣ ಎಷ್ಟು?

ಆ) ಈ ಮೂರು ಯೋಜನೆಗಳಿಂದ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿಗಳಿಗೆ ಒಳಪಡುವುದು? (ತಾಲ್ಲೂಕುವಾರು ವಿವರ ನೀಡುವುದು)

ಇ) ಇಲ್ಲಿಯವರೆಗೆ ಮೂರು ಏತ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಲಾಗಿರುವ ಹಣ ಎಷ್ಟು?

ಈ) ಎ ಮತ್ತು ಬಿ ಸ್ಕೀಮ್ ಅಡಿಯಲ್ಲಿ ಎಷ್ಟು ಹಣ ಬೇಕಾಗುವುದು, ಅದನ್ನು ಯಾವ ಹಂತ ಹಂತಗಳಲ್ಲಿ ಹಣ ನೀಡಲು ಸರ್ಕಾರ ನಿರ್ಧರಿಸಿದೆ? (ಪರಿಪೂರ್ಣ ವಿವರ ನೀಡುವುದು).

ಉ) ಇದನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಬೇಕಾಗಿರುವ ಅವಧಿ ಎಷ್ಟು?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಸ್ಕೀಮ್ 'ಎ'ನಲ್ಲಿ ಬರುವ ಈ ಕೆಳಗಿನ ಏತ ನೀರಾವರಿ ಯೋಜನೆಗಳಿಗೆ 1998-99ನೇ ಸಾಲಿನಲ್ಲಿ ಒದಗಿಸಿರುವ ಅನುದಾನ ಕೆಳಕಂಡಂತಿದೆ.

1)	ಮುಳವಾಡ ಏತ ನೀರಾವರಿ	ರೂ.620.00 ಲಕ್ಷ
2)	ಗುತ್ತಿ ಬಸವಣ್ಣ ಏತ ನೀರಾವರಿ	ರೂ.280.00 ಲಕ್ಷ

3) ಚಿಮ್ಮಲಗಿ ಏತ ನೀರಾವರಿ ಇದು ಸ್ಕೀಮ್ 'ಬಿ'ನಲ್ಲಿ ಬರುವುದರಿಂದ ಯಾವ ಅನುದಾನವನ್ನು ಒದಗಿಸಿಲ್ಲ.

ಆ) ಸ್ಕೀಮ್ 'ಎ'ನಲ್ಲಿ ಬರುವ 2 ಏತ ನೀರಾವರಿ ಯೋಜನೆಗಳಿಂದ ನೀರಾವರಿ ಒಳಪಡುವ ತಾಲ್ಲೂಕುವಾರು ಪ್ರದೇಶದ ವಿವರ ಕೆಳಕಂಡಂತಿದೆ.

1) ಮುಳವಾಡ ಏತ ನೀರಾವರಿ

ಬಸವನ ಬಾಗೇವಾಡಿ ತಾಲ್ಲೂಕು-	16,659 ಹೆಕ್ಟೇರ್
ಬಿಜಾಪೂರ ತಾಲ್ಲೂಕು-	8,330 ಹೆಕ್ಟೇರ್
ಜಮಖಂಡಿ ತಾಲ್ಲೂಕು	5,861 ಹೆಕ್ಟೇರ್
	30,850 ಹೆಕ್ಟೇರ್

2) ಗುತ್ತಿ ಬಸವಣ್ಣ ಏತ ನೀರಾವರಿ ಸಿಂದಗಿ ತಾಲ್ಲೂಕು-41,900 ಹೆಕ್ಟೇರ್

3) ಚಿಮ್ಮಲಗಿ ಏತ ನೀರಾವರಿ ಇದನ್ನು ಸ್ಕೀಮ್ 'ಬಿ'ನಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿರುವುದರಿಂದ ನೀರಾವರಿಗೊಳಪಡುವ ಪ್ರದೇಶದ ವಿವರ ಲಭ್ಯವಿಲ್ಲ.

ಇ) 1) ಮುಳವಾಡ ಏತ ನೀರಾವರಿ ಯೋಜನೆ ರೂ. 1784.35 ಲಕ್ಷಗಳು

2) ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ ರೂ. 11.00 ಲಕ್ಷಗಳು

3) ಚಿಮ್ಮಲಗಿ ಏತ ನೀರಾವರಿ ಯೋಜನೆ. ರೂ. ಇಲ್ಲ

ಈ) ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಮ್ 'ಎ' ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕೆಲಸಗಳ ಉಳಿದ ಕಾಮಗಾರಿಗಳಿಗೆ ಬೇಕಾಗುವ ಒಟ್ಟು ಹಣ ರೂ.6550.11 ಕೋಟಿಗಳು ಎಂದು ಅಂದಾಜು ಮಾಡಲಾಗಿದೆ. ಸ್ಕೀಮ್ 'ಬಿ' ಅಡಿಯಲ್ಲಿ ಬೇಕಾಗುವ ಹಣದ ವಿವರಗಳನ್ನು ಸಿದ್ದ ಪಡಿಸಲಾಗವುದು.

ಉ) ಸ್ಕೀಮ್ 'ಎ' ಕಾಮಗಾರಿಗಳನ್ನು ಕ್ರಿ.ಶ. 2000 ಇಸವಿಯಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಸ್ಕೀಮ್ 'ಬಿ' ಇನ್ನೂ ಪ್ರಾರಂಭವಾಗಿಲ್ಲ.

ರಾಜ್ಯದಲ್ಲಿ ವಕ್ಫ್‌ಗೆ ಸೇರಿದ ಆಸ್ತಿಗಳ ಬಗ್ಗೆ

2939:(4078)

ಶ್ರಿ ಹೆಚ್.ಡಿ.ಬಸವರಾಜು (ವಿರಾಜಪೇಟೆ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಕ್ಫ್‌ಗೆ ಸೇರಿದ ಆಸ್ತಿ ಎಷ್ಟು ಮತ್ತು ಅವು ಯಾವ ಯಾವ ಸ್ಥಳಗಳಲ್ಲಿ ಇರುತ್ತವೆ? (ವಿವರ ನೀಡುವುದು)

ಆ) ವಕ್ಫ್‌ಗೆ ಸೇರಿದ ಎಷ್ಟು ಆಸ್ತಿಯನ್ನು ಪರಭಾರೆ ಮತ್ತು ಲೀಸ್‌ಗೆ ಈವರೆಗೆ ನೀಡಿರುತ್ತದೆ. ಅವು ಯಾವುದು ಮತ್ತು ಯಾವಾಗ ಈ ಕ್ರಮ ಕೈಗೊಂಡಿರುತ್ತಾರೆ. ಹಾಗೂ ಇದರಿಂದ ವಕ್ಫ್‌ಗೆ ಬಂದಿರುವ ಆದಾಯ ಎಷ್ಟು?

ಶ್ರೀ ಆರ್.ರೋಷನ್ ಬೇಗ್:

ಅ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಸುಮಾರು 22,202 ವಕ್ಫ್ ಸಂಸ್ಥೆಗಳು